ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್

ಶ್ರೀ ಎಸ್.ಎನ್. ಕೆಂಚಣ್ಣ -ವಿರುದ್ಧ-ಶ್ರೀಮತಿ ಅನಿತಾ ಮತ್ತು ಇತರರು

ಸಂಕೀರ್ಣ ಮೊದಲ ಅಪೀಲುಸಂಖ್ಯೆ: 11803/2012 (ಎಂಬಿ), ದಿನಾಂಕ 19 ನೇ ಜೂನ್, 2018

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್. ಸುನಿಲ್ ದತ್ ಯಾದವ್:

ವಿಷಯವನ್ನು ಇಬ್ಬರೂ ಪಕ್ಷಕಾರರ ಸಮ್ಮತಿಯೊಂದಿಗೆ ಅಂತಿಮ ವಿಲೆಗಾಗಿ ಅಂಗೀಕರಿಸಿ, ಕೈಗೆತ್ತಿಕೊಳ್ಳಲಾಗಿರುತ್ತದೆ.

2. ಪ್ರಸ್ತುತ ಅಪೀಲನ್ನು, ವಿಮಾದಾರ ಕಂಪನಿಯ ಹೊಣೆಗಾರಿಕೆಯನ್ನು ಮನ್ನಾ ಮಾಡಿ, ಆ ಕಂಪನಿಗೆ ಬದಲಾಗಿ ವಾಹನದ ಮಾಲೀಕನಾಗಿರುವಂಥ ಇಲ್ಲಿನ ಅಪೀಲುದಾರನ ಮೇಲೆ ಆ ಹೊಣೆಗಾರಿಕೆಯನ್ನು ಹೊರಿಸಿರುವಂಥ ಎಂವಿಸಿಸಂಖ್ಯೆ: 987/2003 ರಲ್ಲಿನ ನ್ಯಾಯಾಧಿಕರಣದ ಆದೇಶವನ್ನು ಪ್ರಶ್ನಿಸಿ ವಾಹನದ ಮಾಲೀಕನು ಸಲ್ಲಿಸಿರುತ್ತಾನೆ.

3. ಪಕ್ಷಕಾರರನ್ನು ಅನುಕೂಲತೆಯ ಉದ್ದೇಶಕ್ಕಾಗಿ ಅಧಿ ವಿಚಾರಣಾ ನ್ಯಾಯಾಲಯದ ಎದುರಿನ ಅವರ ಶ್ರೇಣಿಯ ಮೂಲಕವೇ ಉಲ್ಲೇಖಿಸಲಾಗಿರುತ್ತದೆ.

4. ಅಪೀಲು, ಮಾಲೀಕನ ಮೇಲೆ ಹೊಣೆಗಾರಿಕೆ ವಿಧಿಸಿರುವುದನ್ನು ಪ್ರಶ್ನಿಸಲು ಸೀಮಿತವಾಗಿದ್ದು, ಮಾನ್ಯ ನ್ಯಾಯಾಧೀಕರಣವು, ನೀಡಿರುವ ಪರಿಹಾರದ ಐತೀರ್ಪಿನ ಪ್ರಮಾಣಾನುಸಾರಕ್ಕೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪವನ್ನು ವ್ಯಕ್ತಪಡಿಸಿರುವುದಿಲ್ಲ.

5. ದಿನಾ ಂ ಕ:19.09.2003 ರ ಂ ದು ನಡೆದ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ.ಮೃತನು ರಾತ್ರಿ ಸುಮಾರು 8.00 ಗಂಟೆಯ ವೇಳೆಗೆ ಕೆಎ-06- ಇ -7564 ನೋಂದಣಿ ಸಂಖ್ಯೆಯನ್ನು ಹೊಂದಿರುವ ಹೀರೋ ಹೋಂಡ ಬೈಕ್ನಲ್ಲಿ ತನ್ನ ಕೆಲಸವನ್ನು ಪೂರೈಸಿಕೊಂಡು ಗುಬ್ಬಿಯಿಂದ ತುಮಕೂರಿಗೆ ಬರುತ್ತಿರುವಾಗ, 'ಪ್ರಕಾಶ ' ಎಂಬುವವರ ಹೆಸರಿನಲ್ಲಿ ನೋಂದಣಿಯಾಗಿರುವ ಕೆಎ-06-ಬಿ -9069 ಸಂಖ್ಯೆಯ ಬಸ್ಸಿಗೆ ಡಿಕ್ಕಿ ಹೊಡೆದಿರುತ್ತದೆ.ಬೈಕ್ ಓಡಿಸುತ್ತಿದ್ದ ಆರ್.ಪಿ. ಸಿದ್ದಲಿಂಗಪ್ಪ ಗಾಯಗಳಿಂದಾಗಿ ಮೃತನಾಗಿರುತ್ತಾನೆ.ಮೃತನು ಗಜಾನನ ಅರ್ಥ್ ಮೂವರ್, ಎಸ್.ವಿ.ಆರ್. ಎಂಟರ್ಪ್ರೈಸಸ್ನ ಮಾಲೀಕನಾಗಿದ್ದು, ಮರಳು ವ್ಯವಹಾರವನ್ನು, ಕೃಷಿ ಕಾರ್ಯವನ್ನು, ರಿಯಲ್ ಎಸ್ಟೇಟ್ ವ್ಯವಹಾರವನ್ನು ನಡೆಸುತ್ತಿದ್ದು ಮಾಸಿಕ 50,000/- ರೂಪಾಯಿಗಳಿಗಿಂತ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಹೆಚ್ಚು ಹಣವನ್ನು ಗಳಿಸುತ್ತಿದ್ದನೆಂದು ಕ್ಲೇಮು ಅರ್ಜಿಯಲ್ಲಿ ಹೇಳಲಾಗಿರುತ್ತದೆ.

6. ಅಪಘಾತವು ಬಸ್ ಚಾಲಕನ ನಿರ್ಲಕ್ಷ್ಯ ಎ ಹಾಗೂ ಅಸಡ್ಡೆಯ ಚಾಲನೆಯಿಂದಲೇ ಉಂಟಾದುದೆಂದು ಆಪಾದಿಸಿ, ಪರಿಹಾರವನ್ನು ಕೋರಲಾಗಿರುತ್ತದೆ.ಕೇಮು ಅರ್ಜಿಯ ಮೇಲೆ ನೋಟೀಸನ್ನು ನೀಡಿದ ತರುವಾಯ, ವಿಮಾದಾರ ಪ್ರತ್ಯರ್ಜಿದಾರ ಸಂಖ್ಯೆ .2 ಹಾಜರಾಗಿ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಲಾಗಿರುತ್ತದೆ.ಕ್ಲೇಮು ಅರ್ಜಿಯ ದೃಢೀಕ್ತಿಗಳನ್ನು ನಿರಾಕರಿಸುವುದರೊಂದಿಗೆ ಪ್ರತಿವಾದ ಮಾತ್ರವೇ ವಿವಾದವಾಗಿರುವಂಥ ಅನುಮತಿಯ ಉಲ್ಲಂಘನೆಗೆ ಸಂಬಂಧಿಸಿದ್ದುದಾಗಿದ್ದು, ಅದನ್ನು ಈ ಮುಂದಿನಂತೆ ವಾದಿಸಲಾಗಿರುತ್ತದೆ:

" ಪರಿಹಾರವನ್ನು ಸಂದಾಯ ಮಾಡುವ ಈ ಪ್ರತ್ಯರ್ಜಿದಾರನ ಬದ್ಧತೆಯು ಆರ್.ಸಿ, ಎಫ್ಸಿಯ ಸಿಂಧುತ್ವದ ಮೇಲೆ ಹಾಗೂ ಪ್ರಶ್ನಿತ ವಾಹನಕ್ಕೆ ಸಂಬಂಧಿಸಿದ ಅನುಮತಿಯ ಮೇಲೆ ಅವಲಂಬಿಸಿರುತ್ತದೆ

7. ಪ್ರತ್ಯರ್ಜಿದಾರಸಂಖ್ಯೆ: 1 ಅಂದರೆ ಇಲ್ಲಿನ ಅಪೀಲುದಾರನು ಆಕ್ಷೇಪಣೆಗಳ ಹೇಳಿಕೆಯನ್ನು ಸಲ್ಲಿಸಿ, ಅದರಲ್ಲಿ ಅಪಘಾತವು ಹಿರೋಹೊಂಡ ಮೋಟಾರು ಸೈಕಲಿನ ಅಸಡ್ಡೆ ಹಾಗೂ ನಿರ್ಲಕ್ಷ್ಯದ ಚಾಲನೆಯಿ ಂ ದ ಅಪಘಾತ ಸಂಭವಿಸಿರುತ್ತದೆಂದು ಒತ್ತಿ ಹೇಳಿರುತ್ತಾರೆ.ಪ್ರತ್ಯರ್ಜಿದಾರ ಸಂಖ್ಯೆ .2 ವಿಮಾ 0 ಕಂಪನಿಯಲ್ಲಿಯೇ ಬಸ್ಸಿನ

ಮಾಲೀಕರು, ತಮ್ಮ ಬಸ್ಸಿನ ವಿಮೆಯನ್ನು ಮಾಡಿಸಿರುವುದರಿಂದ ಹಾಗೂ ಪಾಲಿಸಿಯು ಜಾರಿಯಲ್ಲಿದ್ದು, ಎಲ್ಲಾ ತೊಂದರೆಗಳನ್ನು ಒಳಗೊಂಡಿರುವುದರಿಂದ ಪ್ರತ್ಯರ್ಜಿದಾರ ಸಂಖ್ಯೆ .2 ವಿಮಾ ಕಂಪೆನಿಯೇ ಪರಿಹಾರವನ್ನು ಸಂದಾಯ ಮಾಡಲು ತಕ್ಕದ್ದಾಗಿರುತ್ತದೆ.ಅಲ್ಲದೆ, ಅನುಮತಿ ಪತ್ರದಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರಶ್ನಿತ ಬಸ್ಸಿಗೆ ಚಿತ್ರದುರ್ಗದಿಂದ ಕೆ.ಬಿ.ಕ್ರಾಸ್ಗೆ ಅನುಮತಿಯಿದ್ದು, ಬಸ್ಸು ಕೆ.ಬಿ. ಕ್ರಾಸ್ಗೆ ಬಂದ ನಂತರ ಸ್ವಲ್ಪ ಮಟ್ಟಿಗಿನ ರಿಪೇರಿ ಕಾರ್ಯವಿದ್ದುದರಿಂದ, ದಿನಾಂಕ 19-9-2003ರಂದು ರಿಪೇರಿಗಾಗಿ ತುಮಕೂರಿನ ಬಿ.ಹೆಚ್. ರಸ್ತೆಯ ಎಚ್.ಎಸ್.ವಿ. ಆಟೋ ಡೀಸೆಲ್ ವರ್ಕ್ ಇಲ್ಲಿಗೆ ಬಸ್ಸನ್ನು ಬಿಡಲಾಗಿತ್ತೆಂದೂ ಒತ್ತಿ ಹೇಳಿರುತ್ತಾರೆ.ಮುಂದುವರೆದು, ಮಾಲೀಕರು, ರಾತ್ರಿ 8.00 ಗಂಟೆಗೆ ರಿಪೇರಿ ಕಾರ್ಯ ಪೂರ್ಣಗೊಂಡು, ತನ್ನ ನಿಯತ ಮಾರ್ಗದಲ್ಲಿ ತನ್ನ ನಿರಂತರ ಸಾಗಣೆಯನ್ನು ಕೈಗೊಳ್ಳುವ ಸಲುವಾಗಿ ಕೆ.ಬಿ. ಕ್ರಾಸ್ ಕಡೆ ಹಿಂದಿರುಗಲಾಗುತ್ತಿತ್ತೆಂದು ವಾದಿಸಿದ್ದು, ಕ್ಲೇಮುದಾರರು ಸದರಿ ಮಾರ್ಗದಲ್ಲಿ ಬಸ್ಸು ಹಾದುಹೋಗಿರುವ ಅನುಕೂಲತೆಯನ್ನು ಪಡೆದುಕೊಂಡು ಪಾಲಿಸಿಯಡಿಯಲ್ಲಿ ಪರಿಹಾರವನ್ನು ಕ್ಲೇಮು ಮಾಡುವ ಉದ್ದೇಶಕ್ಕಾಗಿ ಮಾತ್ರ ಆಪಾದಿತ ಅಪಘಾತದಲ್ಲಿ ಗುಬ್ಬಿ ಪೊಲೀಸು ಪ್ರಾಧಿಕಾರಿಗಳೊಂದಿಗೆ ಷಾಮೀಲಾಗಿ ಪ್ರತ್ಯರ್ಜಿದಾರ ಸಂಖ್ಯೆ .1 ರವರಿಗೆ ಸಂಬಂಧಿಸಿದ ಬಸ್ಸನ್ನು ಸುಳ್ಳಾಗಿ ಸಿಕ್ಕಿಸಿ ಹಾಕಿರುತ್ತಾರೆಂಬುದು ಕಂಡು ಬರುತ್ತದೆ.

8. ವಿವಾದಾಂಶಗಳನ್ನು ರೂಪಿಸಿದ ತರುವಾಯ ಮಾನ್ಯ ನ್ಯಾಯಾಧಿಕರಣವು ಅಧಿವಿಚಾರಣೆಗೆ ಸಂಬಂಧಿಸಿದ ಪ್ರಕರಣವನ್ನು ಕೈಗೆತ್ತಿಕೊಂಡಿರುತ್ತದೆ.ಕ್ಲೇಮುದಾರರು ಪ್ರಾ.ಸಾ .1 ಹಾಗೂ ಪ್ರಾ.ಸಾ .2 ಗಳ ಮೂಲಕ ಸಾಕ್ಷ್ಯಗಳನ್ನು ಮಂಡಿಸಿದ್ದು, ಆರ್.ಡಬ್ಲ್ಯು .1 ರ ಮೂಲಕ ಪ್ರತ್ಯರ್ಜಿದಾರ ಸಂಖ್ಯೆ .2 ಸಾಕ್ಷ್ಯವನ್ನು ಮಂಡಿಸುವಾಗ ನಿಶಾನೆ ಪಿ .1 ರಿಂದ ಪಿ .14 ಕ್ಕೆ ಸಂಬಂಧಿಸಿದ ಪೊಲೀಸು ತನಿಖಾ ದಾಖಲೆಗಳು ಹಾಗೂ ಇತರೆ ದಸ್ತಾವೇಜುಗಳನ್ನು ಗುರುತು ಮಾಡಲಾಗಿದ್ದು, ವಿಮಾ ಪಾಲಿಸಿ, ಆರ್.ಸಿ ಉದ್ಧೃತಗಳು ಹಾಗೂ ಹಿಂಬರಹಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ಗುರುತು ಮಾಡಲಾಗಿರುತ್ತದೆ.ಪ್ರತ್ಯರ್ಜಿದಾರ ಸಂಖ್ಯೆ.1, ಮಾಲೀಕ ಆರ್.ಡಬ್ಲ್ಯು .2 ವರ್ಕ್ಶಾಪ್ ಮಾಲೀಕ ಆರ್ಡಬ್ಲ್ಯು.ಸದರಿ ಬಸ್ಸಿನ ಚಾಲಕ ಲೋಕೇಶ್, ಆರ್ಡಬ್ಲ್ಯು .4 ಮೂಲಕ ಸಾಕ್ಷ್ಯವನ್ನು ಮಂಡಿಸಿರುತ್ತಾರೆ.

9. ನ್ಯಾಯಾಧಿಕರಣವು ಸಾಕ್ಷ್ಯವನ್ನು ಪರಿಗಣಿಸಿದ ತರುವಾಯ, ಸಾಕ್ಷ್ಯದ ಸಮಯದಲ್ಲಿ ದಸ್ತಾವೇಜುಗಳನ್ನು ಗುರುತುಮಾಡಿ, ಎಲ್ಲಾ ವಾದಗಳನ್ನು ಪರಿಗಣಿಸಿ, ಕೇಮಿನ ಹಕ್ಕಿಗೆ ಸಂಬಂಧಿಸಿದಂತೆ ಸಕಾರಾತ್ಮಕವಾಗಿ ಅಭಿಪ್ರಾಯಪಟ್ಟಿದ್ದು, ವಾರ್ಷಿಕ ಶೇ .6 ರಷ್ಟು ಬಡ್ಡಿದರದೊಂದಿಗೆ ರೂ. 9,40,000/-ರೂಪಾಯಿಗಳ ಪರಿಹಾರದ ಐತೀರ್ಪನ್ನು ನೀಡಲಾಗಿರುತ್ತದೆ.ಬದ್ಧತೆಯ ಪ್ರಶ್ನೆಗೆ ಸಂಬಂಧಿಸಿದಂತೆ, ಅನುಮತಿ ನೀಡಿರುವ ವ್ಯಾಪ್ತಿಗೆ ಒಳಪಡದಂಥ ಸ್ಥಳದಲ್ಲಿ ಅಪಘಾತ ಸಂಭವಿಸಿದೆಯೆಂಬುದು ಒಪ್ಪಿತ ವಿಷಯವಾಗಿರುವಾಗ, ಪ್ರತ್ಯರ್ಜಿದಾರ ಸಂಖ್ಯೆ .1 ಪಾಲಿಸಿಯ ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿರುತ್ತಾನೆಂದು ಅಭಿಪ್ರಾಯಪಟ್ಟಿದ್ದು, ವಿಮಾದಾರರ ಬದ್ಧತೆಯನ್ನು ಮನ್ನಾ ಮಾಡಿ, ಅದನ್ನು ಮಾಲೀಕನ ಮೇಲೆ ಹೊರಿಸಲಾಗಿರುತ್ತದೆ.

10. ಈಗ ಸದರಿ ಆದೇಶವನ್ನು ಪ್ರಶ್ನಿಸಿದ್ದು, ಬೈಕ್ ಸವಾರನು ಏಕಮಾತ್ರವಾಗಿ ಅಪಘಾತಕ್ಕೆ ಹೊಣೆಗಾರನಾದನೆಂಬ ಹಾಗೂ ಸಿ.ಸಿ.ಸಂಖ್ಯೆ .765/2003 ರಲ್ಲಿ ಕ್ರಿಮಿನಲ್ ಪ್ರಕರಣವನ್ನು ಬಸ್ಸಿನ ಚಾಲಕನ ವಿರುದ್ಧ ನೋಂದಾಯಿಸಲಾಗಿದ್ದು, ಅದು ಖುಲಾಸೆಯಾಗಿದ್ದು, ವಾಹನವನ್ನು ತಪ್ಪಾಗಿ ಸಿಕ್ಕಿಸಿಹಾಕಲಾಗಿದೆಯೆಂಬ ವಾದವನ್ನು ನ್ಯಾಯಾಧಿಕರಣವು ಪುರಸ್ಕರಿಸಿರುವುದಿಲ್ಲವೆಂದೂ ವಾದಿಸಲಾಗಿದೆ.ಅಪೀಲುದಾರರ ಮುಖ್ಯವಾದ ಒಂದೇ ವಾದವೆಂದರೆ ವಾಹನವು ಖಾಲಿಯಿದ್ದು, ಗ್ಯಾರೇಜಿನಿಂದ ರಿಪೇರಿ ಕೆಲಸ ಮುಗಿದ ತರುವಾಯ ಚಾಲನೆ ಮಾಡಿಕೊಂಡು, ಅನುಮತಿ ಪಡೆದ ಮಾರ್ಗದಲ್ಲಿ ಎಂದಿನಂತೆ ಬಸ್ಸನ್ನು ಓಡಿಸಲು ಕೆ.ಬಿ. ಕ್ರಾಸ್ಗೆ ಹಿಂತಿರುಗುವಾಗ ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತಾರೆ.ಇದೂ ಅಲ್ಲದೆ, ಮೋಟಾರು ವಾಹನಗಳ ಅಧಿನಿಯಮ, 1988 (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಅಧಿನಿಯಮ ಎಂದು ಉಲ್ಲೇಖಿಸಲಾಗಿರುತ್ತದೆ) ರ 66 ( 3) ನೇ ಪ್ರಕರಣದ ಬಲದಿಂದ, ವಾಹನವನ್ನು ದುರಸ್ತಿಗಾಗಿ ತೆಗೆದುಕೊಂಡು ಹೋಗುವುದು ಅನುಮತೀಯವೆಂದೂ, ಅಂಥ ಸಮಯದಲ್ಲಿ ಯಾವುದೇ ಅಪಘಾತವು ಉಂಟಾದಲ್ಲಿ, ಅದಕ್ಕೆ ಸಂಬಂಧಿಸಿದ ಬದ್ಧತೆಯನ್ನು ವಿಮಾ ಕಂಪನಿಯು ತಪ್ಪಿಸಿಕೊಳ್ಳಲಾಗುವುದಿಲ್ಲ.

11. ವಾದ ವಿವಾದದ ಸಮಯದಲ್ಲಿ ಅಪೀಲುದಾರನು ಮಂಡಿಸಿದ ಪರ್ಯಾಯ ವಾದವು, ಅನುಮತಿಯಿರುವ ಮಾರ್ಗದ ದಿಕ್ಕು ಬದಲಿಸುವುದು ಅಧಿನಿಯಮದ 149 ನೇ ಪ್ರಕರಣದಡಿಯಲ್ಲಿನ ಲಭ್ಯವಾದ ಶಾಸನಾತ್ಮಕ ಭದ್ರತೆಯಾಗಿರುವುದಿಲ್ಲ ಹಾಗಾಗಿ, ವಿಮಾ ಕಂಪನಿಯ ಬದ್ಧತೆಯನ್ನು ವಿನಾಯಿತಿಗೊಳಿಸಲಾಗುವುದಿಲ್ಲ.

12. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ವಿಮಾದಾರರು, ಅಪಘಾತ ಸಂಭವಿಸಿದ ತುಮಕೂರಿನಲ್ಲಿ ವಾಹನವನ್ನು ಓಡಿಸಲು ಯಾವುದೇ ಅನುಮತಿ ಇರುವುದಿಲ್ಲವೆಂದೂ ಹಾಗೂ ಅಪಘಾತ ಸಂಭವಿಸಿದ ಸ್ಥಳಕ್ಕೆ ಸಂಬಂಧಿಸಿದಂತೆ ಅನುಮತಿ ಇಲ್ಲದಿರುವುದು ವಿವಾದಿತ ವಿಚಾರವಲ್ಲವೆಂದೂ, ಅನುಮತಿಯ ಅಂಥ ಉಲ್ಲಂಘನೆಯ ವಿಮಾ ಪಾಲಿಸಿಯ ಉಲ್ಲಂಘನೆಯಾಗಿದ್ದು, ವಿಮಾ ಕಂಪನಿಯು ತನ್ನ ಬದ್ಧತೆಯಿಂದ ಮಾನ್ಯಾ ಮಾಡಲಾಗಿರುತ್ತದೆ.ಮುಂದುವರೆದು, ವಾಸ್ತವವಾಗಿ, ಬಸ್ಸಿನಲ್ಲಿನ ಪ್ರಯಾಣಿಕರು, ಬಸ್ಸಿನ ಮಾಲೀಕನು ಹಾಗೂ ಗ್ಯಾರೇಜಿನ ಮಾಲೀಕರುಗಳು ಒಬ್ಬರನ್ನೊಬ್ಬರು ಬಲ್ಲವರಾಗಿದ್ದು, ವಿಮಾದಾರರ ವಿರುದ್ಧ ಬೈಕ್ ಸವಾರನ ವಿಚಾರಲ್ಲಿ ಷಾಮೀಲಾಗಿರುತ್ತಾರೆಂದೂ ವಾದಿಸಿರುತ್ತಾರೆ.ಅಲ್ಲದೆ, ವಿಮೆಯ ಉದ್ದೇಶ ಪೂರ್ವಕ ಉಲ್ಲಂಘನೆ ಹಾಗೂ ಅನುಮತಿಯಿಲ್ಲದ ಮಾರ್ಗದಲ್ಲಿ ಅಂಥ ಉದ್ದೇಶಪೂರ್ವಕ ಉಲ್ಲಂಘನೆ ವಾಹನವನ್ನು ಚಾಲನೆ ಮಾಡಿರುವ ಮಟ್ಟಿಗೆ ಇಲ್ಲಿ ವಿಮಾದಾರನ ಬದ್ಧತೆಯನ್ನು ದೃಢೀಕರಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲವೆಂದೂ ಸಹ ವಾದಿಸಲಾಗಿರುತ್ತದೆ.

13. ಪರಿಗಣನೆಗೆ ಸಂಬಂಧಿಸಿದ ಅಂಶವು ಈ ಮುಂದಿನಂತಿರುತ್ತದೆ:

" ದುರಸ್ತಿ ಮಾಡಿಸಿಕೊಂಡು ವಾಹನವು ಹಿಂದಿರುಗುವಾಗ ಹಾಗೂ ಅನುಮತಿಯಿಲ್ಲದ ಮಾರ್ಗದಲ್ಲಿ ಅಪಘಾತ ಸಂಭವಿಸಿದಾಗ ವಿಮಾದಾರರಿಗೆ ನಷ್ಟಭರ್ತಿಯನ್ನು ವಿಸ್ತರಿಸಲಾಗುತ್ತದೆಯೇ?"

14. ದುರಸ್ತಿಯಾದ ತರುವಾಯ ಖಾಲಿ ವಾಹನವು ಕೆ.ಬಿ. ಕ್ರಾಸ್ಗೆ ಹಿಂತಿರುಗಿ ಬರುತ್ತಿರುವಾಗ ಆಪಾದಿತ ಅಪಘಾತ ಸಂಭವಿಸಿದೆ ಎಂದು ಹೇಳಿರುವ ಆಕ್ಷೇಪಣೆಗಳ ಲಿಖಿತ ಹೇಳಿಕೆ/ಹೇಳಿಕೆಗಳಲ್ಲಿ ನಿರ್ದಿಷ್ಟವಾಗಿ ಹೇಳಲಾದಂತೆ ಅಪೀಲುದಾರರ ವಾದಗಳು ಸ್ಪಷ್ಟವಾಗಿದ್ದು, ಲಿಖಿತ ಹೇಳಿಕೆಗಳ 9 ನೇ ಪ್ಯಾರಾವು ಈ ಮುಂದಿನಂತಿರುತ್ತದೆ:

9. ಮುಂದುವರೆದು, ಪ್ರಶ್ನಿತ ಬಸ್ಸು ಅಂದರೆ, ಕೆಎ-06 ಬಿ -9069 ಎಂಬ ನೋಂದಣಿ ಸಂಖ್ಯೆ ಹೊಂದಿರುವ ಪ್ರಕಾಶ್ ಬಸ್ಸು ಚಿತ್ರದುರ್ಗದಿಂದ ಕೆ.ಬಿ.ಕ್ರಾಸ್ಗೆ ಓಡಾಡಲು ಅನುಮತಿಯನ್ನು ಪಡೆದಿದ್ದು, ಹೆಚ್ಚುವರಿ ಮಾರ್ಗವಾಗಿ ಕೆ.ಬಿ. ಕ್ರಾಸ್ನಿಂದ ಹೊಸದುರ್ಗಕ್ಕೆ ಹಾಗೂ ಒಂದೇ ಒಂದು ಟ್ರಿಪ್ ಕೆ.ಬಿ. ಕ್ರಾಸ್ನಿಂದ ಚಿತ್ರದುರ್ಗಕ್ಕೆ ಓಡಾಡಲೂ ಅನುಮತಿಯನ್ನು ಪಡೆದುಕೊಂಡಿತ್ತು.ದಿನಾಂಕ 19-9-2003ರಂದು ಸದರಿ ಬಸ್ಸು ಕೆ.ಬಿ. ಕ್ರಾಸ್ಗೆ ಮಧ್ಯಾಹ್ನ 12 ಗಂಟೆಗೆ ತಲುಪಿತು.ಸ್ವಲ್ಪಮಟ್ಟಿಗಿನ ದುರಸ್ತಿ ಕೆಲಸವಿದ್ದುದರಿಂದ, ಸದರಿ ಬಸ್ಸು ಎಂದಿನ ಮಾರ್ಗದಲ್ಲಿ ಓಡಾಡುತ್ತಿರಲಿಲ್ಲ.ಆದರೆ ಸರಿಯಲ್ಲದೆ ರೀತಿಯಲ್ಲಿ ಲಾಭ ಪಡೆಯುವ ಉದ್ದೇಶದೊಂದಿಗೆ ಲ ಹಾಗೂ ಪ್ರತ್ಯರ್ಜಿದಾರನಿಗೆ ಸರಿಯಲ್ಲದ ನಷ್ಟವನ್ನು ಉಂಟು ಮಾಡುವ ಉದ್ದೇಶದೊಂದಿಗೆ ಎಂ.ಎಚ್. ಪಾಟ್ನಾ ಮಾರ್ಗವಾಗಿ ಬಿ.ಎಚ್. ರಸ್ತೆಯಲ್ಲಿ ಸದರಿ ಬಸ್ಸು ಹಾದು ಹೋಗುವ ಅನುಚಿತ ಅವಕಾಶವನ್ನು ಪಡೆದುಕೊಂಡು, ಅರ್ಜಿದಾರರು ಗುಬ್ಬಿ ಪೊಲೀಸರೊಂದಿಗೆ ಷಾಮೀಲಾಗಿ ಈ ಬಸ್ಸನ್ನು ತಪ್ಪಾಗಿ ಸಿಕ್ಕಿಸಿರುತ್ತಾರೆ.ಇಲ್ಲಿನ ಪ್ರತ್ಯರ್ಜಿದಾರರು ಹಾಗೂ ಗುಬ್ಬಿ ಪೊಲೀಸ್ ಠಾಣೆಯ ಅಂದಿನ ಪೊಲೀಸ್ ಸಬ್ ಇನ್ಸ್ಪೆಕ್ಟರ್ಗಳ ವೈಮನಸ್ಯವು ಇದ್ದಿರಬಹುದೆ ಂ ಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.ಈ ಹಿನ್ನೆಲೆಯಲ್ಲಿ, ಪೊಲೀಸ್ ಹಾಗೂ ಅರ್ಜಿದಾರರು ಒಟ್ಟಿಗೆ ಷಾಮೀಲಾಗಿ, ಪೂರ್ವನಿಯೋಜಿತವಾಗಿಯೇ, ಈ ಅಪಘಾತದ ಪ್ರಕರಣದಲ್ಲಿ ಈ ಅರ್ಜಿದಾರರ ವಾಹನವನ್ನು ಸಿಕ್ಕಿಸಿರುತ್ತಾರೆ '

15. ವಾಸ್ತವವಾಗಿ, ಅಪಘಾತವು ಸಂಭವಿಸಿಲ್ಲವೆಂದೂ, ವಿಮೆಯನ್ನು ಕ್ಲೇಮು ಮಾಡುವ ಉದ್ದೇಶಕ್ಕಾಗಿ ಮಾತ್ರವೇ ಸುಳ್ಳು ಪ್ರಕರಣವನ್ನು ಬಸ್ಸಿನ ಮಾಲೀಕನು ಸಲ್ಲಿಸಿರುವನೆಂದು ಒತ್ತಿ ಹೇಳಲಾಗಿದ್ದಾಗ್ಯೂ, ಪೊಲೀಸ್ ತನಿಖಾ ದಾಖಲೆಗಳನ್ನು ಒಳಗೊಂಡಂತೆ ಇತರೆ ದಾಖಲೆಗಳು ವಾಸ್ತವವಾಗಿ ಅಪಘಾತ ಸಂಭವಿಸಿದೆಯೆಂದೇ ಸೂಚಿಸುತ್ತಿವೆ.ಆರೋಪ ಪಟ್ಟಿಯನ್ನು ಬಸ್ಸಿನ ಚಾಲಕನ ವಿರುದ್ಧ ಸಲ್ಲಿಸಲಾಗಿದ್ದು, ಬಸ್ಸು ಅಪಘಾತಕ್ಕೆ ಈಡಾಗಿದ್ದರೆ ಹೇಗೋ ಹಾಗೆ ಎಲ್ಲಾ ಅಂಶಗಳನ್ನು ಅಧಿಕಾರ ವ್ಯಾಪ್ತಿಯ ಪೊಲೀಸರಿಂದ ಬಸ್ಸನ್ನು ಅಭಿಗ್ರಹಿಸಲಾಗಿರುತ್ತದೆ.ಎಚ್.ಎಸ್.ವಿ. ಆಟೋ ಡೀಸಲ್ ವರ್ಕ್ ಶಾಪ್ಗೆ ರಿಪೇರಿಗಾಗಿ ವಾಹನವನ್ನು ತೆಗೆದುಕೊಂಡು ಹೋಗಲಾಗಿತ್ತೆಂಬ ತಮ್ಮ ವಾದವನ್ನು ಪುಷ್ಟೀಕರಿಸಲು, ಸದರಿ ಗ್ಯಾರೇಜಿನ ಮಾಲೀಕರಾಗಿದ್ದಂಥ ರಿಯಾಜ್ನನ್ನು ವಿಚಾರಣೆ ಮಾಡಿದ್ದು, ಆತ, ಬಸ್ಸನ್ನು ರಿಪೇರಿಗಾಗಿ ಗ್ಯಾರೇಜಿಗೆ ತಂದು ಬಿಟ್ಟನು.ರಿಪೇರಿಯಾದ ತರುವಾಯ ಅದೇ ದಿನ ರಾತ್ರಿ ಸುಮಾರು 8.00 ಗಂಟೆಗೆ ಬಸ್ಸನ್ನು ತೆಗೆದುಕೊಂಡು ಹೋಗಲಾಯಿತೆಂದು ಹೇಳಿರುತ್ತಾರೆ.ರಿಪೇರಿಯ ಅಂದಾಜನ್ನು ಪ್ರತ್ಯರ್ಜಿದಾರ ಸಂಖ್ಯೆ .1 ನಿಶಾನೆ.ಡಿ .5 ಎಂದು ಗುರುತು ಮಾಡಿರುತ್ತಾರೆ ಹಾಗೂ ಆರ್ಡಬ್ಲ್ಯು 3 ನಿಶಾನೆ ಡಿ.5 ರ ನೀಡಿಕೆಯನ್ನು ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ.ವಾಹನವನ್ನು ಸದರಿ ದಿನದಂದು ರಿಪೇರಿಗೆ ಬಿಡಲಾಗಿತ್ತೆಂಬ ಹೇಳಿಕೆಗೆ ವಿರುದ್ಧವಾಗಿ ಆರ್.ಡಬ್ಲ್ಯು 3 ರ ಪಾಟೀ-ಸವಾಲಿನ

ಸಮಯದಲ್ಲಿ ಏನನ್ನು ಹೊರದೆಗೆಯಲಾಗಲಿಲ್ಲ.ಆದಾಗ್ಯೂ ಅಪಘಾತದ ಸ್ಥಳವು, ಅನುಮತಿ ಪಡೆದ ಸ್ಥಳದೊಳಗೆ ಒಳಗೊಳ್ಳುವುದಿಲ್ಲವೆಂಬುದು ಒಪ್ಪಿತ ವಿಚಾರವಾಗಿದೆ.

16. ಅಧಿನಿಯಮದ 66 ನೇ ಪ್ರಕರಣವು, ಮೋಟಾರು ವಾಹನದ ಯಾರೇ ಮಾಲೀಕನು, ಪರಂತುಕದ ಸ್ವರೂಪದಲ್ಲಿರುವಂಥ ಅಧಿನಿಯಮದ ಉಪ-ಪ್ರಕರಣದಲ್ಲಿನ ಅನುಮತಿಯಲ್ಲಿ ಅಥವಾ ಅನ್ಯಥಾ ಮಂಜೂರಾತಿಯಲ್ಲಿ ಗೊತ್ತುಪಡಿಸಿದ ಷರತ್ತುಗಳ ಮೂಲಕ ಅನುಮತಿಸಿದುದನ್ನುಳಿದು ಯಾರೇ ಪ್ರಯಾಣಿಕರು ಅಥವಾ ಸರಕುಗಳನ್ನು ಅಂಥ ವಾಹನ ವಾಸ್ತವಿಕವಾಗಿ ಕೊಂಡಯ್ಯುವಂತಿರಲಿ ಅಥವಾ ಇಲ್ಲದಿರಲಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಸಾಗಣೆ ವಾಹನದಂತೆ ವಾಹನವನ್ನು ಬಳಸಿಕೊಳ್ಳುವಂತಿಲ್ಲ ಅಥವಾ ಬಳಸಿಕೊಳ್ಳಲು ಅನುಮತಿಸುವಂತಿಲ್ಲವೆಂದು ಉಪಬಂಧ ಕಲ್ಪಿಸಿರುತ್ತದೆ.ಆದಾಗ್ಯೂ ಮುಂದುವರೆದು, 66 ನೇ ಪ್ರಕರಣವು, ಪ್ರಕರಣದಡಿಯಲ್ಲಿನ ನಿಷೇಧವನ್ನು ವಾಹನಗಳ ನಿರ್ದಿಷ್ಟ ಪ್ರವರ್ಗಗಳಿಗೆ ಹಾಗೂ ವಾಹನಗಳನ್ನು ನಿರ್ದಿಷ್ಟ ಬಳಕೆಗೆ ನಿಗದಿಪಡಿಸಿದಾಗ ಅನ್ವಯಿಸುವಂತಿಲ್ಲವೆಂದು ಉಪಬಂಧ ಕಲ್ಪಿಸುತ್ತದೆ.ಪ್ರಸ್ತುತ ಪ್ರಕರಣಕ್ಕೆ ಅಧಿನಿಯಮದ 66 ( 1) ನೇ ಹಾಗೂ 66 ( 3) (ಪಿ) ಪ್ರಕರಣಗಳು ಸೂಕ್ತವಾದುದವಾಗಿದ್ದು ಯುಕ್ತ ಉದ್ಧರಣಗಳು ಈ ಮುಂದಿನಂತಿರುತ್ತವೆ:

“(1) ಮೋಟಾರು ವಾಹನದ ಯಾರೇ ಒಡೆಯನು, ಅಂಥ ವಾಹನವು ಯಾರೇ ಪ್ರಯಾಣಿಕರನ್ನು ಅಥವಾ ಯಾವುದೇ ಸರಕುಗಳನ್ನು ಒಯ್ಯುತ್ತಿರಲಿ ಅಥವಾ ಇಲ್ಲದಿರಲಿ, ಆ ವಾಹನವನ್ನು ಸಾರಿಗೆ ವಾಹನವಾಗಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಬಳಸಲು ಪ್ರಾದೇಶಿಕ ಅಥವಾ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ನಿಯಮಿಸಲಾದ ಯಾವುದೇ ಪ್ರಾಧಿಕಾರವು ಅವನನ್ನು ಅಧಿಕೃತಗೊಳಿಸಿ ನೀಡಿದ ಅಥವಾ ಮೇಲು ರುಜು ಮಾಡಿದ ಪರ್ಮಿಟ್ಟಿನ ಷರತ್ತುಗಳಿಗೆ ಅನುಸಾರವಾಗಿ ಹೊರತು, ಆ ವಾಹನವನ್ನು ಅಂಥ ಸ್ಥಳದಲ್ಲಿ ಬಳಸಲಾಗುತ್ತಿರುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಅಥವಾ ಬಳಸಲು ಅನುಮತಿಸತಕ್ಕದ್ದಲ್ಲ;

" ( 3) 1 ನೇ ಉಪ-ಪ್ರಕರಣದ ಉಪಬಂಧಗಳು, (ಪಿ)-ದುರಸ್ತಿಯ ಉದ್ದೇಶಕ್ಕಾಗಿ ಯಾವುದೇ ಸ್ಥಳಕ್ಕೆ ಖಾಲಿಯಾಗಿ ಹೋಗುತ್ತಿರುವ ಯಾವುದೇ ಸಾರಿಗೆ ವಾಹನಕ್ಕೆ ಅನ್ವಯವಾಗತಕ್ಕದ್ದಲ್ಲ.”

17. ಅಪೀಲುದಾರನು, ವಾಹನವು ತನ್ನ ನಿರಂತರ ಮಾರ್ಗದಲ್ಲಿ ಸಂಚರಿಸಲು ವರ್ಕ್ ಶಾಪ್ಪಿಂದ ಕೆ.ಬಿ. ಕ್ರಾಸ್ಗೆ ಹಿಂದಿರುಗಿ ಬರುವಾಗ ಆಪಾದನೆಗೆ ಒಳಗಾದ ಅಪಘಾತವು ಸಂಭವಿಸಿರುತ್ತದೆಂದೂ ಈ ಸಂದರ್ಭದಲ್ಲಿ ವಿಮೆಯು ಜಾರಿಯಲ್ಲಿದ್ದು, ಸದರಿ ಅಪಘಾತವು ಅದರಲ್ಲಿ ಒಳಗೊಳ್ಳುತ್ತದೆಂದೂ ಅತ್ಯಂತ ನಿಷ್ಠುರವಾಗಿ ವಾದಿಸಿರುವಾಗ, ಪ್ರತ್ಯರ್ಜಿದಾರ ಸಂಖ್ಯೆ .4 ರ ಪರ ಮಾನ್ಯ ವಕೀಲರು, ಅಧಿನಿಯಮದ 66 ( 3) (ಪಿ) ಪ್ರಕರಣದ ಸಾದಾ ಓದು “ ಒಂದು ವಾಹನವನ್ನು ಪ್ರಯಾಣಿಕರಿಲ್ಲದೆ ದುರಸ್ಥಿಯ ಉದ್ದೇಶಕ್ಕಾಗಿ ಯಾವುದೇ ಸ್ಥಳಕ್ಕೆ ಖಾಲಿಯಾಗಿ ಚಾಲನೆ ಮಾಡಿಕೊಂಡು ಹೋಗುವಾಗ ”, ಯಾವುದೇ ಸಾರಿಗೆ ವಾಹನಕ್ಕೆ ಪ್ರಯಾಣಿಕರಿಲ್ಲದೆ ಚಾಲನೆ ಮಾಡುವಾಗ ಮಾತ್ರ ನಿಷೇಧದಿಂದ ವಿನಾಯಿತಿಯನ್ನು ಕಾರ್ಯಾರಂಭ ಮಾಡಬಹುದೆಂಬ ಮಟ್ಟಿಗಿರುತ್ತದೆಂದು ನಿರೂಪಿಸಿರುತ್ತದೆಂದು ವಾದಿಸಿರುತ್ತಾರೆ.ಒಪ್ಪಿಕೊಂಡ ವಿಚಾರದ ಹಿನ್ನೆಲೆಯಲ್ಲಿ, ಅಪೀಲುದಾರ ವಾದವಾಗಿರುವಂತೆ ಬಸ್ಸು ವರ್ಕ್ಶಾಪ್ಪಿಂದ ಹಿಂದಿರುಗಿ ಬರುತ್ತಿರುತ್ತದೆ.ಇದನ್ನು ಅಧಿನಿಯಮದ 66 ( 3) ನೇ ಪ್ರಕರಣದ ಪ್ರಯೋಜನವೆಂದು ವಿಸ್ತರಿಸಲಾಗುವುದಿಲ್ಲವೆಂದು ವಾದಿಸಲಾಗಿರುತ್ತದೆ.ಪ್ರತ್ಯರ್ಜಿದಾರ ಸಂಖ್ಯೆ .4 ಅಧಿನಿಯಮದ 66 (3) (ಪಿ) ಪ್ರಕರಣದಡಿಯಲ್ಲಿನ ಪ್ರಯೋಜನವು, ಬಸ್ಸಿನಲ್ಲಿ ಪ್ರಯಾಣಿಕರಿದ್ದ ಕಾರಣ ಅನ್ವಯವಾಗುವುದಿಲ್ಲವೆಂದು ವಾದಿಸಿರುತ್ತಾರೆ.

18. ಅಧಿನಿಯಮದ 66 ( 3) (ಪಿ) ಪ್ರಕರಣದ ನಿಷೇಧದ ಪರಂತುಕದಡಿಯಲ್ಲಿನ ವಿನಾಯಿತಿಯು “ ದುರಸ್ಥಿಯ ಉದ್ದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಸ್ಥಳಕ್ಕೆ ” ಹೋಗುವಾಗ ಸಾರಿಗೆ ವಾಹನಕ್ಕೆ ಅನ್ವಯ ಮಾಡಬೇಕೆಂದು ಪ್ರಕರಣದ ಸಾದಾ ಓದು ಸೂಚಿಸುತ್ತಿರುವುದು ಕಂಡು ಬಂದಿದ್ದಾಗ್ಯೂ, ಅಧಿನಿಯಮದ 66 (3) ನೇ ಪ್ರಕರಣದಡಿಯಲ್ಲಿನ ಪರಂತುಕದಲ್ಲಿನ ಸಂದರ್ಭದಲ್ಲಿನ ಒಂದು ಸ್ಥಳವನ್ನು ಕಂಡುಕೊಂಡಿರುವುದನ್ನು ಗಮನಿಸಿದ ಅಧಿನಿಯಮದ 66 ( 3) (ಪಿ) ಪ್ರಕರಣವನ್ನು ಕಟ್ಟುನಿಟ್ಟಾದ ಪರಂತುಕದಂತೆ ಅರ್ಥೈಸಿಕೊಳ್ಳದೆ, ' ಉಳಿಸುವಿಕೆ ಖಂಡ'ದ ಸ್ವರೂಪದಲ್ಲಿರುತ್ತದೆಂದು ಅರ್ಥೈಸಿಕೊಳ್ಳಬೇಕಾಗಿರುತ್ತದೆ.ಅಧಿನಿಯಮದ 66 ನೇ ಪ್ರಕರಣವು ಮೋಟಾರು ವಾಹನಗಳನ್ನು ಸಾರ್ವಜನಿಕ ಸ್ಥಳದಲ್ಲಿ ಸಾರಿಗೆ ವಾಹನದಂತೆ ಬಳಸತಕ್ಕದ್ದಲ್ಲ ಅಥವಾ ಬಳಸಬೇಕೆಂದು ಅನುಮತಿಸತಕ್ಕದ್ದಲ್ಲವೆಂಬ ನಿಷೇಧದೊಂದಿಗೆ ಆರಂಭವಾಗುತ್ತದೆ.ಅಧಿನಿಯಮದ 66 ( 3) ನೇ ಪ್ರಕರಣದಡಿಯಲ್ಲಿನ ಪರಂತುಕವು ಸಾಗಣೆ ವಾಹನಗಳ ಹಲವಾರು ಉಪ ಖಂಡಗಳು ಪ್ರವರ್ಗಗಳು

ಅಥವಾ ಅನುಮತಿ ಪಡೆಯುವ ಅಗತ್ಯತೆಯಿಂದ ವಿನಾಯಿತಿ ಪಡೆಯದಂಥ ವಾಹನಗಳ ನಿರ್ದಿಷ್ಟ ಬಳಕೆಗಳನ್ನು ಒಳಗೊಂಡಿರುತ್ತದೆ.ಉದಾಹರಣೆಗೆ ವಿನಾಯಿತಿಯು ಈ ಮುಂದಿನವುಗಳನ್ನು ಒಳಗೊಂಡಿರುತ್ತವೆ:

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಹೊಂದಿರುವ ಸರ್ಕಾರದ ಉದ್ದೇಶಗಳಿಗೆ ಸಂಬಂಧಿಸಿದಂತೆ ಬಳಸಿದ ಯಾವುದೇ ವಾಣಿಜ್ಯ ಉದ್ಯಮ [ 3 ( ಎ)] ದೊಂದಿಗೆ ಸಂಬಂಧಪಡದ ಉದ್ದೇಶಗಳಿಗಾಗಿ ಬಳಸಿದ ಸಾರಿಗೆ ವಾಹನಗಳನ್ನು ಚಾಲನೆಗೆ ಸಾಧ್ಯವಾಗದ ವಾಹನವನ್ನು ಎಳೆದುಕೊಂಡು ಹೋಗುವುದಕ್ಕೆ ಅಥವಾ ಸುರಕ್ಷಿತ ಸ್ಥಳ [ 3 (  ಇ)] ಕ್ಕೆ ಚಾಲನೆಗೆ ಸಾಧ್ಯವಾಗದ ವಾಹನವನ್ನು ಮತ್ತೊಂದು ವಾಹನದಿಂದ ಬಿಡಿಸುವುದಕ್ಕೆ ಬಳಸಿದ ಸಾಗಣೆ ವಾಹನವನ್ನು [ 3(ಕೆ)] ವಾಹನದ ನೋಂದಣಿಯ ಉದ್ದೇಶಕ್ಕೆ ಸಂಬಂಧಿಸಿದ ಯಾವುದೇ ಸ್ಥಳಕ್ಕೆ ಖಾಲಿಯಾಗಿ ಹೋಗುವಾಗ ತಾತ್ಕಾಲಿಕವಾಗಿ ನೋಂದಣಿ ಮಾಡಿಕೊಂಡಂಥ ಯಾವುದೇ ಸಾರಿಗೆ ವಾಹನಕ್ಕೆ, ಪ್ರವಾಹ, ಭೂಕಂಪ ಅಥವಾ ಯಾವುದೇ ಇತರೆ ನೈಸರ್ಗಿಕ ವಿಕೋಪದಲ್ಲಿ ಅಥವಾ ರಸ್ತೆ ಮೇಲಿನ ಅಡ್ಡಿ ಅಥವಾ ಕಂಡರಿಯದ ಸಂದರ್ಭಗಳಲ್ಲಿ ಸಿಲುಕಿರುವಂಥ ಯಾವುದೇ ಸಾರಿಗೆ ವಾಹನಕ್ಕೆ ಹಾಗೂ ಕೊನೆಯದಾಗಿ, ದುರಸ್ತಿ [ 3(ಪಿ)] ಯ ಉದ್ದೇಶಕ್ಕಾಗಿ ಯಾವುದೇ ಸ್ಥಳಕ್ಕೆ ಖಾಲಿಯಾಗಿ ಹೋಗುವಾಗಿನ ಯಾವುದೇ ಸಾರಿಗೆ ವಾಹನಕ್ಕೆ ಅದರ ಗಮ್ಯವನ್ನು [ 3(ಎಂ)] ತಲುಪಲು ಇದನ್ನು ಸಮರ್ಥಗೊಳಿಸಲು ಯಾವುದೇ ಇತರ ಮಾರ್ಗಕ್ಕೆ ಬದಲಾಯಿಸಬೇಕೆಂದು ಅಗತ್ಯಪಡಿಸಲಾಗಿರುತ್ತದೆ.

ಈ ವಿನಾಯಿತಿಗಳ ನಿಕಟ ಪರಿಶೀಲನೆಯ ಮೇಲೆ ಅನುಮತಿಯ ಅಗತ್ಯತೆಗಳನ್ನು ಮೇಲಿನಂತೆ ನಿರ್ದಿಷ್ಟ ಉದ್ದೇಶಗಳಿಗೆ ಸಂಬಂಧಿಸಿದಂತೆ ಬಳಸಿದ ವಾಹನಗಳಿಗೆ ಸಂಬಂಧಿಸಿದಂತೆ ವಿಸ್ತರಿಸಬೇಕೆಂದು ಉದ್ದೇಶಿಸಲಾಗುವುದಿಲ್ಲ ವೆಂಬುದಾಗಿ ಪ್ರಕಟವಾಗುತ್ತದೆ.ವಾಸ್ತವವಾಗಿ, ಅಂಥ ವಿನಾಯಿತಿಯು ಇಲ್ಲದಿರುವಾಗ ಕೂಡ ಕಂಡುಬಂದಂತೆ ಮೇಲಿನ ಉದ್ದೇಶಗಳಿಗಾಗಿ ವಾಹನಗಳ ಬಳಕೆಗೆ ಸಂಬಂಧಿಸಿದಂತೆ ಅನುಮತಿಯ ಒತ್ತಡವನ್ನು ಹೇರುವಂತಿಲ್ಲವೆಂಬುದು ತಾರ್ಕಿಕವಾಗಿದ್ದು, ' ಅನುಮತಿ ' ಎಂಬ ಪದವನ್ನು ' ಸಾರ್ವಜನಿಕ ಸ್ಥಳದಲ್ಲಿ ಸಾರಿಗೆ ವಾಹನದಂತೆ ವಾಹನದ ಬಳಕೆ ' ಎಂಬಂತೆ ಪರಿಭಾಷಿಸಿರುತ್ತದೆ.ಹಾಗಾಗಿ, 66 ( 3) ನೇ ಪ್ರಕರಣದ ಪರಂತುಕವು, 66 ( 1) ನೇ ಪ್ರಕರಣದಡಿಯಲ್ಲಿ ಒಳಗೊಂಡ ನಿಷೇಧದಿಂದ ಕೇವಲ ಅನ್ಯಥಾ ಅಂಥ ಬಳಕೆಯ ಹೊರತು ಮೇಲೆ ಹೇಳಿದ ಬಳಕೆಗಳಿಗೆ ಸಂಬಂಧಿಸಿರುತ್ತದೆ.ಹಾಗಾಗಿ, ಎಲ್ಲಾ ಉದ್ದೇಶಗಳಿಗೆ ಸಂಬಂಧಿಸಿದಂತೆ 66 ( 3) (ಪಿ) ಪ್ರಕರಣವು ಉಳಿಸುವಿಕೆಯ ಖಂಡವಾಗಿರುತ್ತದೆ.ವಾಸ್ತವವಾಗಿ, ಉಳಿಸುವಿಕೆಯ ಖಂಡವನ್ನು ಅನ್ಯಥಾ ಈಗಾಗಲೇ ಇರುವಂಥ ಹಕ್ಕುಗಳನ್ನು ನಾಶಮಾಡುವುದರಿಂದ ವ್ಯತಿರಿಕ್ತಗೊಳಿಸಲು ವಿಶಿಷ್ಟವಾಗಿ ಬಳಸಲಾಗಿಸುತ್ತದೆ ಹಾಗೂ ಅವರ ಮುಂದುವರೆಯುವಿಕೆಗೆ ಸಂಬಂಧಿಸಿದಂತೆ ಸಂದಿಗ್ಧವಾಗಿರಬಹುದಾದಂಥ ಉಪಬಂಧದ ಶಾಸನಬದ್ಧ ಪ್ರಸ್ತಾವನೆ ಮೂಲಕ ವ್ಯಕ್ತವಾಗಿ ನಿರ್ಬಂಧಿಸಬೇಕೆಂದು ಅಗತ್ಯಪಡಿಸಲಾಗಿರುತ್ತದೆ.

19. ಅನುಮತಿಯ ಷರತ್ತುಗಳ ಮಾರ್ಗವನ್ನು ಬದಲಾಯಿಸಿ ದುರಸ್ಥಿಯ ಉದ್ದೇಶಕ್ಕಾಗಿ ಸಾರಿಗೆ ವಾಹನವನ್ನು ಬಳಸಿರುವೆಡೆ, ದುರಸ್ತಿಯ ಸ್ಥಳಕ್ಕೆ ದಾಟಿಸುವ ವಾಹನದ ಅಂಥ ಬಳಕೆಯನ್ನು ಅನುಮತಿಯ ಷರತ್ತಿಗನುಸಾರವಾಗಿರುವುದರಿಂದ ಕಾನೂನುಸಮ್ಮತ ವಿನಾಯಿತಿಯೆಂದು ಅರ್ಥೈಸಿಕೊಳ್ಳಬೇಕಾಗಿರುತ್ತದೆಂಬುದು ಕಂಡು ಬರುವ ಉದ್ದೇಶವಾಗಿರುತ್ತದೆ.ವಾಹನವನ್ನು ದುರಸ್ತಿಗಾಗಿ ಒಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವಾಗ ಹಾಗೂ ತನ್ನ ಕೆಲಸದ ಟ್ರಿಪ್ಸ್ಗಳನ್ನು ಆರಂಭಿಸಬೇಕಾದ ಸ್ಥಳಕ್ಕೆ ದುರಸ್ತಿಯಾದ ಸ್ಥಳದಿಂದ ವಾಹನವನ್ನು ತೆಗೆದುಕೊಂಡು ಹೋಗುವಾಗ ವಿನಾಯಿತಿಯನ್ನು ನೀಡುವ ಉದ್ದೇಶವು ಉತ್ತಮವಾದುದಾಗಿರುತ್ತದೆ ಹಾಗೂ ಅದು ವಿಧಾನಮಂಡಲದ ಉದ್ದೇಶವಾಗಿರುತ್ತದೆಂದು ಕಂಡು ಬರುತ್ತದೆ.66 (3) (ಪಿ) ಪ್ರಕರಣವನ್ನು ಉಳಿಸುವಿಕೆಯ ಖಂಡದ ಸ್ವರೂಪದಲ್ಲಿನ ಖ ಂ ಡದಂತೆ ಅರ್ಥೈಸಿಕೊಂಡಲ್ಲಿ, ಇದು ವ್ಯತಿರಿಕ್ತತೆಗೆ ಪರಿಣಾಮಕಾರಿಯಾಗಬಹುದು. ಆದರೆ, ಉಳಿಸುವಿಕೆಗಾಗಿನ ಸ್ಪಷ್ಟತಾ ಹಕ್ಕುಗಳು ಕಳೆದುಕೊಳ್ಳುವಂಥವಾಗಿರಬಹುದು.ವಾಸ್ತವವಾಗಿ, ಅಧಿನಿಯಮದ 66 ನೇ ಪ್ರಕರಣದ ಉದ್ದೇಶವನ್ನು ಗಮನಿಸಿದಾಗ, ದುರಸ್ತಿಯ ಉದ್ದೇಶಕ್ಕಾಗಿ ಕೈಗೊಳ್ಳಬೇಕಾಗಿರುವಾಗ ವಾಹನದ ಬಳಕೆಯನ್ನು ನಿಷೇಧಿ ಸ ಲು ಇದು ಉದ್ದೇಶಿಸಿರುವುದಿಲ್ಲವೆಂದು ಖ ಂ ಡಿತ ವಾಗಿ ಹೇಳಬಹುದಾಗಿರುತ್ತದೆ.ಒರಿಸ್ಸಾ ಸರ್ಕಾರ ಹಾಗೂ ಇತರರು -ವಿರುದ್ಧ ಬಿಜಯ ಸಿ. ತ್ರಿಪಥಿ ' ಪ್ರಕರಣದಲ್ಲಿ ವಾಹನಗಳ ಮೇಲೆ ತೆರಿಗೆ ವಿಧಿಸುವುದರೊಂದಿಗೆ ವ್ಯವಹರಿಸುವಾಗ ಅನುಸರಿಸಬೇಕಾದ ವಿಷಯಗಳಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಅಭಿಪ್ರಾಯಗಳು 66 ನೇ ಪ್ರಕರಣದ ಚ ವ್ಯಾಪ್ತಿಯ ಮೇಲೆ ಈ ಮುಂದಿನಂತೆ ಬೆಳಕು ಚೆಲ್ಲುತ್ತದೆ:

“10. ಉಚ್ಚ ನ್ಯಾಯಾಲಯವು ಮೋಟಾರು ವಾಹನಗಳ ಚ ಅಧಿನಿಯಮದ 66 ನೇ ಪ್ರಕರಣವನ್ನು ತಪ್ಪಾಗಿ ಓದಿಕೊಂಡಿದೆ ಯೆ ಂ ಬುದು ಕಂಡುಬರುತ್ತದೆ.ಮೋಟಾರು ವಾಹನಗಳ ಅಧಿನಿಯಮದ 66 ನೇ ಪ್ರಕರಣವು ಮೋಟಾರು ವಾಹನದ ಮಾಲೀಕ ಅನುಮತಿಯಿಲ್ಲದೆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಸಾರಿಗೆ ವಾಹನದಂತೆ ಅಂಥ ವಾಹನವನ್ನು ಬಳಕೆ ಮಾಡುವಂತಿರುವುದಿಲ್ಲ.ಆದ್ದರಿಂದ, 66 ನೇ ಪ್ರಕರಣವು ಕೇವಲ ಅನುಮತಿಯಿಲ್ಲದೆ ಸಾರಿಗೆ ವಾಹನದಂತೆ ಅಂಥ ವಾಹನದ ಬಳಕೆಯನ್ನು ತಡೆಯುತ್ತದೆ.ಸಾರ್ವಜನಿಕ ರಸ್ತೆಯ ಮೇಲೆ ಅಂಥ ವಾಹನದ ಚಾಲನೆಯನ್ನು ನಿಷೇಧಿಸುವುದಿಲ್ಲ.ಸಾರಿಗೆ ವಾಹನದ ಂ ತೆ ಇದನ್ನು ಬಳಸದಿರುವವರೆಗೆ ಸಾರ್ವಜನಿಕ ರಸ್ತೆಯ ಮೇಲೆ ವಾಹನವನ್ನು ಚಾಲನೆ ಮಾಡಬಹುದಾಗಿರುತ್ತದೆ.ಅತ್ಯಂತ ವಿರಳ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಅಂಥ ವಾಹನದ ಮಾಲೀಕ, ಆ ವಾಹನವನ್ನು ವಿಹಾರಕ್ಕಾಗಿ ತನ್ನ ಕುಟುಂಬದೊಂದಿಗೆ ತೆರಳಲು ಬಳಸಬಹುದಾಗಿರುತ್ತದೆ.66 ನೇ ಪ್ರಕರಣವು ಅಂಥ ಬಳಕೆಯನ್ನು ನಿಷೇದಿಸುವುದಿಲ್ಲ.

20. ಅದರಂತೆ, ಅನಿವಾರ್ಯ ಅವಶ್ಯಕತೆಯಾಗಿರುವಂಥ ಪ್ರಸ್ತುತ ಪ್ರಕರಣದಲ್ಲಿನ ವಾಹನದ ಬಳಕೆಯು, ಅನುಮತಿಯಿಂದ ವಿಚಲನೆಗೊಂಡ ನಿಷೇಧದಿಂದ ನೀಡಲಾಗಿರುವ ವಿನಾಯಿತಿಯಿಂದಾಗಿ ನ್ಯಾಯೋಚಿತವಾಗಿರುತ್ತದೆ.ಸಾಮಾನ್ಯವಾಗಿ, ಪರಂತುಕದ ಪ್ರಕರಣದಲ್ಲಿ ವಹಿಸಲಾದ ಸಂಕುಚಿತ ಅರ್ಥವಿವರಣೆಯನ್ನು ಪ್ರಸ್ತುತ ಖಂಡದಂತೆ, ಪ್ರಸ್ತುತ ಖಂಡವು ಕೇವಲ ಪರಂತುಕದ ಸ್ವರೂಪದಲ್ಲಿರುವುದಿಲ್ಲವೆಂಬುದಕ್ಕೆ ವಿಸ್ತರಿಸಲಾಗುವುದಿಲ್ಲ.

21. ಪರಂತುಕವು ಅವಶ್ಯಕವೆಂದು ಕಂಡುಬಂದಿದ್ದಾಗ, ಪ್ರಸ್ತುತ ಪ್ರಕರಣದಲ್ಲಿರುವ ಖಂಡದ ಪರಿಭಾಷೆಯ ಆಯಾಮವನ್ನು, ಉಳಿಸುವ ಖಂಡದಂತೆ, 10 ನೇ ಪ್ಯಾರಾದಲ್ಲಿ ಷಾಹ್ ಭೋಜ್ರಾಜ್ ಕುವೆರ್ಜಿ ಆಯಿಲ್ ಮಿಲ್ಸ್ ಹಾಗೂ ಗಿನ್ನಿಂಗ್ ಫ್ಯಾಕ್ಟರಿ –ವಿರುದ್ಧ ಸುಭಾಷ್ ಚಂದ್ರ ಯೋಗ್ರಾಜ್ ಸಿನ್ಹಾ [2] ಪ್ರಕರಣದಲ್ಲಿನ 10 ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

"10. ಪರಂತುಕಕ್ಕೆ ಸಂಬಂಧಿಸಿದ ಕಾನೂನು ಯುಕ್ತವಾಗಿಯೇ ಇತ್ಯರ್ಥಗೊಂಡಿದ್ದು, ಸಮರ್ಥವಾಗಿಯೇ ಅರ್ಥೈಸಿಕೊಳ್ಳಲಾಗಿರುತ್ತದೆ.ಸಾಮಾನ್ಯ ನಿಯಮದ ಂ ತೆ, ಒ ಂ ದು ಪರ ಂ ತ ಂ ಕವು, ಅಧಿನಿಯಮಿತಿಯಲ್ಲಿ ಏನಿದೆ ಎಂಬುದಕ್ಕೆ ವಿನಾಯಿತಿಯನ್ನು ಅರ್ಹಗೊಳಿಸಲು ಅಥವಾ ಸೃಜಿಸಲು ಅಧಿನಿಯಮಿತಿಗೆ ಸೇರಿಸಲಾಗಿರುತ್ತದೆ ಹಾಗೂ ಸಾಮಾನ್ಯವಾಗಿ ಒಂದು ಪರಂತುಕವನ್ನು ಸಾಮಾನ್ಯ ನಿಯಮವನ್ನು ಹೇಳುವಂತೆ ಪರಿಭಾಷಿಸಿರುವುದಿಲ್ಲ.ಆದರೆ ಪರಂತುಕಗಳನ್ನು ಕೆಲವೊಮ್ಮೆ ಮುಖ್ಯ ಅಧಿನಿಯಮಿತಿಗಳಿಗೆ ವಿನಾಯಿತಿಗಳ ಂ ತೆ ಅಥವಾ ಅರ್ಹತೆಗಳ ಂ ತೆ ಸೇರ್ಪಡೆ ಮಾಡಿರುವುದಿಲ್ಲ.ಆದರೆ ಉಳಿಸುವಿಕೆ ಖ ಂ ಡಗಳ ಂ ತೆ ಈ ಪ್ರಕರಣಗಳಲ್ಲಿ ಅವುಗಳನ್ನು ಪ್ರಕರಣದಿಂದ ನಿಯಂತ್ರಿಸಿದಂತೆ ಅರ್ಥೈಸುವಂತಿರುವುದಿಲ್ಲ.ಅಧಿನಿಯಮದ 50 ನೇ ಪ್ರಕರಣಕ್ಕೆ ಸೇರ್ಪಡೆ ಮಾಡಲಾದ ಂ ಥ ಪರ ಂ ತುಕವು ನಿರಸಿತದ ಪರಿಣಾಮದೊಂದಿಗೆ ವ್ಯವಹರಿಸುತ್ತದೆ.ಪ್ರಕರಣದ ಮೂಲ ಭಾಗವು ಬಾ ಂ ಬ್ ಸ ಂ ಸ್ಥಾನದಲ್ಲಿ ಜಾರಿಯಲ್ಲಿದ್ದ ಂ ಥ ಎರಡು ಅಧಿನಿಯಮಗಳನ್ನು ನಿರಸಿತಗೊಳಿಸಿರುತ್ತದೆ.ಈ ವಿಷಯದಲ್ಲಿ ಹೆಚ್ಚಿಗೇನನ್ನೂ ಹೇಳದಿದ್ದಲ್ಲಿ, ನಿರಸಿತ ಅಧಿನಿಯಮವನ್ನು ಹೊರಡಿಸದಿದ್ದರೆ ಹೇಗೋ ಹಾಗೆ ಬಾಂಬೆ ಸಾಮಾನ್ಯ ಖಂಡಗಳ ಅಧಿನಿಯಮದ 7 ನೇ ಪ್ರಕರಣವನ್ನು ಅನ್ವಯಿಸಬೇಕಾಗುತ್ತದೆ ಹಾಗೂ ಹಳೆಯ ಕಾನೂನಿನಡಿಯಲ್ಲಿ ಎಲ್ಲಾ ಇತ್ಯರ್ಥದಲ್ಲಿರುವ ದಾವೆಗಳ ಹಾಗೂ ನಡಾವಳಿಗಳನ್ನು ಮುಂದುವರೆಸಬೇಕಾಗಿರುತ್ತದೆ.ಪರಂತುಕದ ಪರಿಣಾಮವನ್ನು ಬಾಂಬೆ ಸಾಮಾನ್ಯ ಖಂಡಗಳ ಅಧಿನಿಯಮದ 7 ನೇ ಪ್ರಕರಣದಿಂದ ವಿಷಯವನ್ನು ಹೊರಕ್ಕಿಡಲು ಹಾಗೂ ವಿಶೇಷ ಉಳಿಸುವಿಕೆಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಲು ರೂಪಿಸಲಾಗಿರುತ್ತದೆ.ಇದನ್ನು ಅಧಿನಿಯಮದ 12 ನೇ ಪ್ರಕರಣವನ್ನು ಪೂರ್ವಾನ್ವಯವೇ ಎಂಬುದನ್ನು ನಿರ್ಧರಿಸಲು ಬಳಸಲಾಗುವುದಿಲ್ಲ.ಉಳಿಸುವಿಕೆ ಖಂಡಗಳನ್ನು ಅಧಿನಿಯಮಗಳನ್ನು ಅರ್ಥೈಸಿಕೊಳ್ಳಲು ಅತ್ಯಲ್ಪ ಪ್ರಮಾಣದಲ್ಲಿ ಬಳಸಿಕೊಳ್ಳಬೇಕೆಂದು ಫಿಲ್ಯಾರಾಲ್ಡ್ -ವಿರುದ್ಧ-ಛಾಂಪನೀಸ್ ಪ್ರಕರಣದಲ್ಲಿ ವುಡ್, ವಿ.ಸಿ. ಯವರು ಅಭಿಪ್ರಾಯಪಟ್ಟಿರುತ್ತಾರೆ.ಈ ಖಂಡಗಳನ್ನು, ಕಳೆದುಕೊಳ್ಳಬಹುದಾದಂಥ ಆದರೆ ಉಳಿಸುವಿಕೆಗಾಗಿನ ಸುರಕ್ಷತಾ ಹಕ್ಕುಗಳಿಗೆ ಬೇರೆಯವುಗಳನ್ನು ನಿರಸಿತ ಮಾಡುವಂಥ ಅಧಿನಿಯಮಗಳನ್ನಾಗಿ ಪರಿಚಯಿಸಬೇಕಾಗಿರುತ್ತದೆ.ಪರಂತುಕವು ಇತ್ಯರ್ಥದಲ್ಲಿರುವ ದಾವೆಗಳನ್ನು ಹಾಗೂ ನಡಾವಳಿಗಳನ್ನು ಉಳಿಸುತ್ತದೆ ಹಾಗೂ ಮುಂದುವರೆದು, ಅಧಿನಿಯಮದಲ್ಲಿ ಪದನಿಮಿತ್ತಗೊಳಿಸಿದ ನ್ಯಾಯಾಲಯಗಳಿಗೆ ಇತ್ಯರ್ಥದಲ್ಲಿರುವ ದಾವೆಗಳು ಹಾಗೂ ನಡಾವಳಿಗಳನ್ನು ವರ್ಗಾಯಿಸಬೇಕೆಂದು ಹಾಗೂ ಅಧಿನಿಯಮದಡಿಯಲ್ಲಿ ಮುಂದುವರೆಸಬೇಕೆಂದು ಹಾಗೂ

ಅಧಿನಿಯಮದ ಯಾವುದೇ ಅಥವಾ ಎಲ್ಲಾ ಉಪಬಂಧಗಳನ್ನು ಅವುಗಳಿಗೆ ಅನ್ವಯಿಸಬೇಕೆಂದು ಅಧಿನಿಯಮಿತಿಗೊಳಿಸುತ್ತದೆ.ಮಾನ್ಯ ಸಾಲಿಸಿಟರ್ ' ಜನರಲ್ರವರು, ಉಳಿಸುವ ಖಂಡವನ್ನು ಮತ್ತು ಕಾನೂನಿನಂತೆ ಪರಿಗಣಿಸಿದ್ದರೂ ಕೂಡ ಆ ಖಂಡವನ್ನು ಪರಂತುಕದ ಮೂಲಕ ಅಧಿನಿಯಮಿತಗೊಳಿಸುವುದನ್ನು ನಿರಸನದ ಸಮಯದಲ್ಲಿ ಇತ್ಯರ್ಥದಲ್ಲಿರುವ ದಾವೆಗಳಿಗೆ ಮಾತ್ರ ಅನ್ವಯಿಸಬೇಕು.ಆದರೆ ಪರಂತುಕಕ್ಕೆ ಸಂಬಂಧಿಸಿದಂತೆ ನಿರಸನದ ಸಮಯದಲ್ಲಿ ಇತ್ಯರ್ಥದಲ್ಲಿರುವ ನಡಾವಳಿಗಳನ್ನು ನಿರಸಿತಗೊಂಡ ಅಧಿನಿಯಮದಿಂದಲೇ ನಿರ್ವಹಿಸಬೇಕೆಂದು ವಾದಿಸಿರುತ್ತಾರೆ.ಮಾನ್ಯ ಅಟಾರ್ನಿ ಜನರಲ್ರವರಿಗನುಸಾರವಾಗಿ, ಉಳಿಸುವಿಕೆಯ ಪರಿಣಾಮ ತುಂಬಾ ವ್ಯಾಪಕವಾಗಿದ್ದು, ಇದು ಅಧಿನಿಯಮದ ಹೊಸ ಕ್ಷೇತ್ರಗಳಿಗೆ ವಿಸ್ತೃತಗೊಂಡಾಗಲೆಲ್ಲಾ ಪರಂತುಕದ ಪರಿಭಾಷೆಗಳೊಂದಿಗೆ ಬರುವಂತೆ ಅಂಥ ಪ್ರಕರಣಗಳಿಗೆ ಇದು ಅನ್ವಯವಾಗುತ್ತದೆ. '

22. ಅಭಿಪ್ರಾಯಗಳು ಪರಂತುಕದ ಪರಿಭಾಷೆಯ ಸ್ವರೂಪಕ್ಕನುಸಾರವಾಗಿದ್ದು ಇವುಗಳನ್ನು ಸಾಂಪ್ರದಾಯಿಕ ಭಾವನೆಯಲ್ಲಿರುವಂಥ ಕೇವಲ ಪರಂತುಕದಂತೆ ಅರ್ಥೈಸದಿದ್ದಾಗ, ಜೆನ್ನಿಂಗ್ಸ್ -ವಿರುದ್ಧ-ಕೆ ಆ 3 ಪ್ರಕರಣದಲ್ಲಿ ಈ ಮುಂದಿನಂತೆ ವಿವರಿಸಲಾಗಿರುತ್ತದೆ:

“ ನಾವು ಇಲ್ಲಿ ವಾಸ್ತವವಾದ ಪರಂತುಕದೊಂದಿಗೆ ಅಥವಾ ಯಾವುದೇ ಹಂತದಲ್ಲಿ ವೆಸ್ಟ್ ದರ್ಬಿ ಯೂನಿಯನ್ ಪ್ರಕರಣ ( 2) ರಲ್ಲಿ ಈ ಸದನ ಅ ಂ ಥ ಪರಂತುಕವನ್ನು ಪರಿಗಣಿಸಿರುವಂತೆ ವ್ಯವಹರಿಸಿರುವುದಿಲ್ಲ.ಸಂಸತ್ತಿನಲ್ಲಿ ರೂಪಿಸಲಾದ ಅಧಿನಿಯಮದ ಒ ಂ ದು ಪ್ರಕರಣವನ್ನು ಅರ್ಥೈಸಿಕೊಳ್ಳಲು, ಒ ಂ ದೇ ಅಧಿನಿಯಮದಲ್ಲಿನ ಇತರೆ ಪ್ರಕರಣಗಳ ತಾತ್ಪರ್ಯ ಹಾಗೂ ಪರಿಣಾಮದ ಪರಿಶೀಲನೆಯ ಮೂಲಕ ಪದಾವಳಿಗಳ ಅರ್ಥವನ್ನು ನಿರಂತರವಾಗಿ ವಿವರಿಸುವ ಅಗತ್ಯವಿರುವುದಿಲ್ಲವೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲವೆಂದು ನಾನು ಭಾವಿಸುತ್ತೇನೆ.ಹಲವಾರು ಗಮನಾರ್ಹ ಉದಾಹರಣೆಗಳು ಮ್ಯಾಕ್ವೆಲ್ ಆನ್ ದ ಇಂಟರ್ಪ್ರಿಟೇಶನ್ ಆಫ್ ಸ್ಟ್ಯಾಟ್ಯೂಸ್, 8 ನೇ ಸಂಪುಟ, ಪಿ.ಪಿ .27, 28 ರಲ್ಲಿ ಕಂಡು ಬರುತ್ತದೆ.ಈ ತತ್ವವು ಒಂದೇ ಪ್ರಕರಣದ ಬೇರೆ ಬೇರೆ ಭಾಗಗಳ ಸಂದರ್ಭದಲ್ಲಿ ಹಾಗೂ ' ಪರಂತು ' ಪದದ ಮೂಲಕ ಅಥವಾ ' ಅಂಥದೇ ಪದಗಳ ' ಮೂಲಕ ನಂತರದ ಭಾಗವು ಪರಿಚಯವಾಗಿರುವಂತಿದ್ದರೂ ಸಮಾನಾಂತರವಾಗಿ ಅನ್ವಯವಾಗುತ್ತದೆ.ನನ್ನ ಪ್ರಕಾರ, ಕೆಂಟ್ಸ್ ಕಾಂಮೆಂಟ್ರಿಸ್ ಆನ್ ಅಮೇರಿಕನ್ ಲಾ, 12 ನೇ ಆವೃತ್ತಿ, ಸಂಪುಟ -1, ಪು .463, ಎನ್ (ಮ್ಯಾಕ್ಸ್ವೆಲ್ ಆನ್ ದ ಇಂಟರ್ಪ್ರಿಟೇಷನ್ಸ್ ಆಫ್ ಸ್ಟ್ಯಾಟ್ಯೂಸ್, 8 ನೇ ಆವೃತ್ತಿ, ಪುಟ 140 ರಲ್ಲಿನ ಅನುಮೋದನೆಯೊಂದಿಗೆ) ರಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು ಸರಿಯಾದುದೇ ಆಗಿರುತ್ತದೆ.

"ನಿಸ್ಸಂದೇಹವಾಗಿ ನಿಜವಾದ ತತ್ವವು, ಅಧಿನಿಯಮಿತ ಖಂಡ, ಉಳಿಸುವಿಕೆ ಖಂಡ ಹಾಗೂ ಪರಂತುಕದ ದೃಷ್ಟಿಯಿಂದ ಪರಿನಿಯಮ ಸಮರ್ಥ ಅರ್ಥವಿವರಣೆ ಹಾಗೂ ತಾತ್ಪರ್ಯವನ್ನು ಒಟ್ಟಿಗೆ ಪರಿಗಣಿಸಿ, ರ್ಥೈಸಿಕೊಳ್ಳಬೇಕಾಗುತ್ತದೆ ಂ ಬುದು ಚಾಲ್ತಿಯಲ್ಲಿರುವ ವಿಷಯವಾಗಿರುತ್ತದೆ

23. ಹಾಗಾಗಿ, 66 ( 3) (ಪಿ) ಪ್ರಕರಣದ ಅರ್ಥ ವಿವರಣೆಯಿಂದ ಅದರಲ್ಲಿ ಪಡೆದ ವಿನಾಯಿತಿಯನ್ನು, ಸಾರಿಗೆ ವಾಹನವು ರಿಪೇರಿಯ ಸ್ಥಳದಿಂದ ಹಿಂದಕ್ಕೆ ಬರುವಾಗ ವಿನಾಯಿತಿಯನ್ನು ವಿಸ್ತರಣೆ ಮಾಡಬೇಕಾಗುತ್ತದೆ ಹಾಗೂ ದುರಸ್ತಿಯ ಸ್ಥಳಕ್ಕೆ ಹೋಗುವುದಕ್ಕೆ ಮಾತ್ರ ನಿಗದಿತಗೊಳಿಸುವಂತಿರುವುದಿಲ್ಲ.ಅಂಥ ಅರ್ಥವಿವರಣೆಯು ದುರಸ್ತಿಯ ಸಮಯದಲ್ಲಿ ವಾಹನದ ಬಳಕೆಯ ಹಕ್ಕುಗಳನ್ನು ಉಳಿಸುವಂಥ ವಿನಾಯಿತಿಯ ಉದ್ದೇಶವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

24. ವಾಹನದಲ್ಲಿ ಪ್ರಯಾಣಿಕರಿದ್ದರೆಂಬ ವಾದಕ್ಕೆ ಬರುತ್ತಾ, ವಾಸ್ತವವಾಗಿ ಬಸ್ಸಿನಲ್ಲಿ ಪ್ರಯಾಣಿಕರಿದ್ದರೆಂದು ಗಾಯಗೊಂಡ ವ್ಯಕ್ತಿಗಳೂ ವಾದಿಸಿರುತ್ತಾರೆ.ಪ್ರಾ.ಸಾ .2 ಶಶಿಕಲಾ ಅಪಘಾತ ಸಂಭವಿಸಿದಾಗ ತಾನು ಹಾಗೂ ಇತರೆ ಪ್ರಯಾಣಿಕರು ಬಸ್ಸಿನಲ್ಲಿ ಇದ್ದದ್ದಾಗಿ ಹೇಳಿರುತ್ತಾರೆ.ಇದರಿಂದ ಬಸ್ಸಿನಲ್ಲಿ ಇತರೆ ಪ್ರಯಾಣಿಕರು ಇದ್ದರೆಂಬುದು ಕಂಡು ಬರುತ್ತದೆ.ಆದಾಗ್ಯೂ, ಪ್ರಾ.ಸಾ .2 ರ ಸಾಕ್ಷ್ಯವನ್ನು, ಈಕೆ ಸ್ವತಃ ಪಾಟೀಸವಾಲಿಗೆ ಒಳಪಡದ ಕಾರಣ ಪ್ರಾ.ಸಾ .2 ರಿ ಂ ದ ಬಿಟ್ಟುಬಿಡಲಾಗಿರುತ್ತದೆಂಬುದನ್ನು ತಿಳಿದುಕೊಳ್ಳುವುದು ಸಮುಚಿತವಾಗಿರುತ್ತದೆ ಹಾಗೂ ತೀರ್ಪಿನ 15 ನೇ ಆಂತರಿಕ ಪುಟದಲ್ಲಿನ 16 ನೇ ಪ್ಯಾರಾದಲ್ಲಿ ನ್ಯಾಯಾಧಿಕರಣವು ಗಮನಿಸಿರುತ್ತದೆ.ಹಾಗಾಗಿ, ಹೆಚ್ಚಿನ ಪರಿಗಣನೆಯನ್ನು ಮೀಸಲಿರಿಸಿರುವುದಿಲ್ಲ.

25. ಮಾರ್ಗ ಬದಲಾವಣೆಯ ಅನುಮತಿಯು ಮೋಟಾರು ವಾಹನಗಳ ಅಧಿನಿಯಮದ 149 ( 2) ನೇ ಪ್ರಕರಣದ ಮಟ್ಟಿಗೆ ವಿಮಾದಾರರ ಹೊಣೆಗಾರಿಕೆಯನ್ನು ಮುಕ್ತಗೊಳಿಸುತ್ತದೆಂದು ಅದರಲ್ಲಿ ನಿರ್ದಿಷ್ಟಪಡಿಸಿದ ಪ್ರತಿವಾದಗಳಿಗನುಸಾರವಾಗಿ ವಿಮಾದಾರರ ಬದ್ಧತೆಯನ್ನು ಮಾತು ಮಾಡುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸುತ್ತದೆಂಬ ವಾದಕ್ಕೆ ಸಂಬಂಧಿಸಿದಂತೆ ಅನುಮತಿ ಇಲ್ಲದಿರುವ ಹಾಗೂ ಅನುಮತಿಯ ನಿಬಂಧನೆಗಳಿಂದ ಮಾರ್ಗಾಂತರ ಮಾಡುವ ನಡುವೆ ಭಿನ್ನತೆ ಮಾಡಲೇಬೇಕೆಂದು ವಾದಿಸಲಾಗಿರುತ್ತದೆ.ಅನುಮತಿ ಇಲ್ಲದಿರುವಾಗ, ಅಧಿನಿಯಮದ 142 ನೇ ಪ್ರಕರಣದ ಪುನರವಲೋಕನದೊಳಗೆ ಬರದಂಥ ಮಾರ್ಗಕ್ಕೆ ಸಂಬಂಧಿಸಿದುದನ್ನು ಒಳಗೊಂಡ ಅನುಮತಿಯ ನಿಬಂಧನೆಗಳ ಉಲ್ಲಂಘನೆಯ ಅಧಿನಿಯಮದ 149 (2) ನೇ ಪ್ರಕರಣದಡಿಯಲ್ಲಿನ ಶಾಸನಾತ್ಮಕ ಬದ್ಧತೆಯನ್ನು ತಪ್ಪಿಸಲು ಆಧಾರವಾಗಬಹುದೆಂಬುದನ್ನು ನಿವೇದಿಸಿಕೊಳ್ಳಲಾಗಿರುತ್ತದೆ.

26. ಪ್ರತ್ಯರ್ಜಿದಾರ ಸಂ .4, ಬಿ.ಟಿ. ವೆಂಕಟೇಶ -ವಿರುದ್ಧ-ಜಗದೀಶ್ ಕುಮಾರ್ ಹಾಗೂ ಇತರರು* ಪ್ರಕರಣದಲ್ಲಿ ವಿಭಾಗೀಯ ಪೀಠದ ತೀರ್ಪನ್ನು ಉದಾಹರಿಸುವಾಗ ಕೆ.ವಿ. ತಿಮ್ಮೆಗೌಡ ವಿರುದ್ಧ ಕಮಲಮ್ಮ ಪ್ರಕರಣದಲ್ಲಿನ ತೀರ್ಪನ್ನು ಅಪೀಲುದಾರರು ಉದಾಹರಿಸಿರುತ್ತಾರೆ ಹಾಗೂ ನ್ಯಾಷನಲ್ ಇನ್ಶೂರೆನ್ಸ್ ಕಂ. ಅ., -ವಿರುದ್ಧ ಚೆಲ್ಲಾ ಭರತಮ್ಮ ಹಾಗೂ ಇತರರು ಪ್ರಕರಣದಲ್ಲಿನ ತೀರ್ಪನ್ನು ಸಹ ಉದಾಹರಿಸಿರುತ್ತಾರೆ.ವಿಭಾಗೀಯ ವ್ಯವಸ್ಥಾಪಕರು, ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.ಅ., 9 -ವಿರುದ್ಧ ಶ್ರೀಮತಿ ಜಯಮ್ಮ ಹಾಗೂ ಇತರರು ' ಪ್ರಕರಣದಲ್ಲಿ ಸಮನ್ವಯ ಪೀಠದ ತೀರ್ಪನ್ನು ಗಮನಕ್ಕೆ ತೆಗೆದುಕೊಳ್ಳುವುದು ಯುಕ್ತವಾಗಿರುತ್ತದೆ.ಇದು ಮೇಲೆ ಉಲ್ಲೇಖಿಸಿದ ಎಲ್ಲಾ ತೀರ್ಪುಗಳನ್ನು ಪರಿಗಣಿಸಿರುತ್ತದೆ ಹಾಗೂ ಅನುಮತಿಯ ಮಿತಿಗೆ ಸಂಬಂಧಿಸಿದಂತೆ ಅಥವಾ 86 ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದಂತಹ ಅನುಮತಿಯ ಷರತ್ತುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಉಲ್ಲಂಘನೆ ಇರುವ ಕಡೆ ವೈರುದ್ಯಗಳು, ಅಂಥ ಉಲ್ಲಂಘನೆಯು 192- ಎ ಪ್ರಕರಣದಡಿಯಲ್ಲಿ ದಂಡ ವಿಧಿಸುವ ಅಥವಾ ಅಧಿನಿಯಮದ 207 ( 1) ಪ್ರಕರಣದಡಿಯಲ್ಲಿ ಆರಂಭಿಸಬೇಕೆಂಬ ಕ್ರಮವನ್ನು ಭರಿಸುವಂಥವಾಗಿರಬೇಕೆಂಬ ತೀರ್ಮಾನಕ್ಕೆ ಬರಲಾಗಿರುತ್ತದೆ.ಮೇಲೆ ನಮೂದಿಸಿದ ತೀರ್ಪನ್ನು ಈ ನ್ಯಾಯಾಲಯವು 149 ( 2) ನೇ ಪ್ರಕರಣದಡಿಯಲ್ಲಿ ಶಾಸನಾತ್ಮಕ ಪ್ರತಿವಾದ ಪ್ರವರ್ಗದೊಳಗೆ ಬರುವಂಥ ಅನುಮತಿ ಇಲ್ಲದಿರುವ ಪ್ರಕರಣದೊಂದಿಗೆ ವ್ಯವಹರಿಸುವಂತೆ ಅನ್ವಯವಾಗದಿರುವಂತಹ ಚೆಲ್ಲಾ ಭರತಮ್ಮರ ಪ್ರಕರಣದಲ್ಲಿನ ತೀರ್ಪನ್ನು ಬೇರ್ಪಡಿಸಿರುತ್ತಾರೆ.ಹಾಗಾಗಿ, ಚೆಲ್ಲಾ ಭರತಮ್ಮಳ ಪ್ರಕರಣದಲ್ಲಿ ವಿಧಿಸಿದ ಕಾನೂನು ಅನುಮತಿಯ ನಿಬಂಧನೆಗಳಲ್ಲಿನ ಉಲ್ಲ ಂ ಘನೆಗೆ ಸ ಂ ಬ ಂ ಧಿಸಿದ ಂ ತೆ ಅನ್ವಯವಾಗುವುದಿಲ್ಲವೆ ಂ ದು ಅಭಿಪ್ರಾಯಪಡಲಾಗಿರುತ್ತದೆ.ಅಲ್ಲದೆ ನ್ಯಾಯಾಲಯವು, ತಿಮ್ಮೆಗೌಡನ ಪ್ರಕರಣದ ಅನ್ವಯತೆಯನ್ನು ಎತ್ತಿಹಿಡಿದಿದ್ದು, ಇದು ಮಾರ್ಗ ಬದಲಾವಣೆಯ ಅನುಮತಿಯು, ಅಧಿನಿಯಮದ 149 (2) ನೇ ಪ್ರಕರಣದ ವ್ಯಾಪ್ತಿಗೆ ಒಳಪಡದಿರುವುದರಿಂದ ವಿಮಾದಾರರ ಹೊಣೆಗಾರಿಕೆಯನ್ನು ವಿಮುಕ್ತಗೊಳಿಸುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.ಹಾಗೆ ಅಭಿಪ್ರಾಯಪಡುವಾಗ, ಈ ನ್ಯಾಯಾಲಯವು ಇದು, ಆ ಪ್ರಕರಣದ ವಿಶಿಷ್ಟ ವಾಸ್ತವಾಂಶಗಳಾಗಿರುತ್ತವೆಂದೂ ಅಭಿಪ್ರಾಯಪಡುವ ಮೂಲಕ ಬಿ.ಟಿ. ವೆಂಕಟೇಶ ನ ಪ್ರಕರಣದ ತೀರ್ಪು ಅನ್ವಯವಾಗುವುದಿಲ್ಲವೆಂದೂ ಹಾಗೂ ಮುಂದುವರೆದು ವಿಭಾಗೀಯ ಪೀಠದ ಮುಂಚಿನ ತೀರ್ಪಾಗಿರುವಂಥ ತಿಮ್ಮೇಗೌಡ ರ ಪ್ರಕರಣದಲ್ಲಿನ ತೀರ್ಪನ್ನು ಪರಿಗಣಿಸಲಾಗುವುದಿಲ್ಲವೆಂದು ಘೋಷಿಸಿರುತ್ತದೆ.

27. ನಾವು, ಈ ಹಿಂದೆ ಉಲ್ಲೇಖಿಸಿದ ಜಯಮ್ಮ ಪ್ರಕರಣದಲ್ಲಿ ಮೇಲಿನದಕ್ಕೆ ಉಲ್ಲೇಖಿಸಿದ ತೀರ್ಪುಗಳನ್ನು ಕುರಿತು ಮಂಡಿಸಿದ ಅರ್ಥ ವಿವರಣೆಯನ್ನು ಒಪ್ಪಿಕೊಂಡು, 66 ( 2) (ಪಿ) ಪ್ರಕರಣದಡಿಯಲ್ಲಿನ ವಿನಾಯಿತಿಯು ಪ್ರಸ್ತುತ ವಾಸ್ತವಾಂಶಗಳಲ್ಲಿ ಅನ್ವಯವಾಗುತ್ತವೆಂಬ ವಾಸ್ತವಾಂಶದೊಂದಿಗೆ ಅನ್ಯಥಾ, ಮಾರ್ಗದ ಅನುಮತಿಯ ಉಲ್ಲಂಘನೆಯಂಥ ಅನುಮತಿಯ ನಿಬಂಧನೆಗಳ ಉಲ್ಲಂಘನೆಯು ವಿಮಾದಾರರ ಬದ್ಧತೆಯನ್ನು ಮನ್ನಾ ಮಾಡುವುದರಲ್ಲಿ ಪರಿಣಮಿಸುವುದಿಲ್ಲ.

28. ತದನುಸಾರವಾಗಿ, ಎಂ.ವಿ.ಸಿ. ಸಂಖ್ಯೆ .987/2003 ರಲ್ಲಿದಿನಾಂಕ: 05.10.2012 ರಂದು ನ್ಯಾಯಾಧಿಕರಣದ ತೀರ್ಪು ಹಾಗೂ ಐತೀರ್ಪನ್ನು, ಮಾಲೀಕನ ಮೇಲಿನ ಹೊಣೆಗಾರಿಕೆಯನ್ನು ಹೊರಿಸುವುದಕ್ಕೆ ಸಂಬಂಧಪಡುವಷ್ಟರಮಟ್ಟಿಗೆ ರದ್ದುಪಡಿಸಲಾಗಿದೆ.ಮೇಲೆ ಮಾಡಲಾದ ಚರ್ಚೆಯ ಹಿನ್ನೆಲೆಯಲ್ಲಿ ವಿಮಾದಾರನು ಪ್ರಸ್ತುತ ಪ್ರಕರಣದಲ್ಲಿ ಹೊಣೆಗಾರಿಕೆಯನ್ನು ಹೊರಬೇಕಾಗಿರುತ್ತದೆ.

29. ತದನುಸಾರವಾಗಿ, ಪ್ರಶ್ನಿಸದಿರುವಂಥ ಐತೀರ್ಪಿನ ಉಳಿದ ಭಾಗವನ್ನು ಭಂಗಪಡಿಸದೆ ಬಿಟ್ಟಿರುವುದರಿಂದ ಅಪೀಲನ್ನು ಅಂಗೀಕರಿಸಲಾಗಿರುತ್ತದೆ.

ಲ್ಲಿ, ಐ.ಎ.ಸಂಖ್ಯೆ .1/2012 ಪರಿಗಣನೆಗಾಗಿ ಊರ್ಜಿತವಾಗಿರುವುದಿಲ್ಲ.ತದನುಸಾರವಾಗಿ ಇದು ವಿಲೆಯಾಗಿರುತ್ತದೆ.

ಠೇವಣಿ ಮಾಡಿರುವ ಮೊಬಲಗನ್ನು ಅಪೀಲುದಾರರಿಗೆ ಹಿಂದಿರುಗಿಸಬೇಕೆಂದು ಆದೇಶಿಸಲಾಗಿರುತ್ತದೆ.